[illegible]

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 866
ಸದಸ್ಯರ ಹೆಸರು : ಡಾ:ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 20-12-2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ. ಸಂ.	ಪ್ರಶ್ನೆ	ಉತ್ತರ
(ಅ)	ಕನ್ನಡ ನಾಡಿನ ಇತಿಹಾಸದಲ್ಲಿ 25 ವರ್ಷಗಳಿಗೂ ಮೀರಿ ಆಳ್ವಿಕೆ ಮಾಡಿದ ಕೆಳದಿಯ ವೀರ ರಾಣಿ ಮಾತೆ ಕೆಳದಿ ಚೆನ್ನಮ್ಮನವರ ಹೆಸರಿನಲ್ಲಿ 'ಜಯಂತಿ' ಮಾಡದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ತೀರ್ಥ ಹಳ್ಳಿಯ 'ಕವಲೇದುರ್ಗ' (ಹಿಂದಿನ ಭುವನಗಿರಿ) ಯಿಂದ ಆಳ್ವಿಕೆ ಮಾಡಿದ ಕೆಳದಿ ರಾಣಿ ಚೆನ್ನಮ್ಮನವರು ಹಿಂದೂ ಹೃದಯ ಸಾಮ್ರಾಜ್ಯ ಛತ್ರಪತಿ ಶಿವಾಜಿ ಅವರ ಪುತ್ರನಿಗೆ ಮತಾಂತರಿ ಕ್ರೂರಿ ಮೊಗಲ್ ದೊರೆ ಔರಂಗಜೇಬ್‌ನ ಕಟ್ಟಾಜ್ಞೆಯನ್ನು ಧಿಕ್ಕರಿಸಿ ಆಶ್ರಯವಿತ್ತು ವೀರತ್ವ ಮೆರೆದವರು 2022ರ ಫೆಬ್ರವರಿ 27 ರಂದು ಇವರ ಆಳ್ವಿಕೆಗೆ 350 ವರ್ಷಗಳು ತುಂಬುವ ಅರ್ಥಪೂರ್ಣ ಹೆಮ್ಮೆಯ ಸಂದರ್ಭದಲ್ಲಿ ಕೆಳದಿ ಚೆನ್ನಮ್ಮನ ಜಯಂತಿಯನ್ನು ಸರ್ಕಾರ ಘೋಷಿಸುವುದೇ?	ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.
(ಇ)	ಇದೀಗ ಸರ್ಕಾರ ಆಚರಿಸುತ್ತಿರುವ ನಾಡಿನ ಸಂಸ್ಕೃತಿ ಬೀರುವ ಇತಿಹಾಸ ನೆನಪಿಸುವ ಉತ್ಸವಗಳನ್ನು ಕೋಟೆ ಕೊತ್ತಲ ಸ್ಥಳಗಳಲ್ಲಿಯೇ ಆಯೋಜಿಸುವ ಆಲೋಚನೆ ಸರ್ಕಾರದ ಮುಂದೇ ಇದೆಯೇ?	
(ಈ)	ಈ ಉತ್ಸವ-ಆಚರಣೆಗಳ ಹಿನ್ನೆಲೆಯಲ್ಲಿ ಮುಂದಿನ ಪೀಳಿಗೆಗೆ ನಮ್ಮ ರಾಜರಸರು ಸಾಮ್ರಾಜ್ಯಗಳಲ್ಲಿ ನಿರ್ಮಿಸಿರುವ ಭವ್ಯ ವಾಸ್ತುಕಲೆ, ವಾಸ್ತುಶಿಲ್ಪ, ಸಂಸ್ಕೃತಿ ಪರಿಚಯಿಸುವ ಉದ್ದೇಶ ಸರ್ಕಾರಕ್ಕಿದೆಯೇ;	
(ಉ)	ಹಾಗಿದ್ದಲ್ಲಿ, ಸೂಕ್ತ ನಿರ್ವಹಣೆ ಇಲ್ಲದೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಿನಾಶದತ್ತ ಸಾಗುತ್ತಿರುವ ಕೋಟೆ ಕೊತ್ತಲ ಅರಮನೆಗಳ ಪುನರ್ ನಿರ್ಮಾಣ ಮಾಡಲು ಪುರಾತತ್ವ-ಪ್ರಾಚ್ಯ ಹಾಗೂ ಪ್ರವಾಸೋದ್ಯಮ ಇಲಾಖೆಯೊಂದಿಗೆ ಪ್ರಯತ್ನ ಮಾಡಲಾಗುವುದೇ:	ಸೂಕ್ತ ನಿರ್ವಹಣೆಯಿಲ್ಲದೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಿನಾಶದತ್ತ ಸಾಗಿರುವ ಕೋಟೆ ಕೊತ್ತಲ ಅರಮನೆಗಳ ಪುನರ್ ನಿರ್ಮಾಣ ಮಾಡಲು ಪುರಾತತ್ವ-ಪ್ರಾಚ್ಯ ಹಾಗೂ ಪ್ರವಾಸೋದ್ಯಮ ಇಲಾಖೆಯೊಂದಿಗೆ ಪ್ರಯತ್ನ ಮಾಡಲಾಗುವುದು.
(ಊ)	ಇದಕ್ಕಾಗಿ ಕನ್ನಡ-ಸಂಸ್ಕೃತಿ ಇಲಾಖೆಯು ನಾಡಿನ ನುರಿತ ಇತಿಹಾಸಜ್ಞರು, ಕಲಾ ನಿಪುಣರು ಸಾಹಿತಿಗಳು, ಸಂಶೋಧಕರನ್ನು ಇಂತಹ ತಪಸ್ವಿ ಕಾರ್ಯದಲ್ಲಿ ತೊಡಗಿಸಿ ಅವರ ಜ್ಞಾನಾನುಭವದ ಕೊಡುಗೆ ಪಡೆಯುವುದೇ?	ನಾಡಿನ ನುರಿತ ಇತಿಹಾಸ ತಜ್ಞರು, ಕಲಾನಿಪುಣರು, ಸಾಹಿತಿಗಳು, ಸಂಶೋಧಕರ ಜ್ಞಾನಾನುಭವ ಪಡೆಯಲಾಗುವುದು.

ಸಂಖ್ಯೆ:ಕಸಂವಾ 91 ಕವಿಸ 2021

((ವಿ. ಸುನಿಲ್ ಕುಮಾರ್)

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು